ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಚಿಕ್ಕಮಗಳೂರು

**ಸಿ.ಸಿ.ನಂ. 44/2018**

ಸಾಕ್ಷಿದಾರರ ಹೆಸರು : ಕೆ.ಎಂ. ವಸಂತಕುಮಾರ
ತಂದೆಯ ಹೆಸರು : ಮಲ್ಲಾರಾಜ್ ಅರಸ್ ಪಿ.ಡಬ್ಲ್ಯೂ: 11
ವಯಸ್ಸು : 48 ವರ್ಷ
ವೃತ್ತಿ : ಮುಖ್ಯ ಪೇದೆ-264, ನಗರ ಪೋಲಿಸ್ ಠಾಣೆ
ವಾಸ : ಚಿಕ್ಕಮಗಳೂರು

ದಿನಾಂಕ: 4-7-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಕಲಂ 299 ಸಿ ಆರ್ ಪಿ ಸಿ ರ ಸಾಕ್ಷಿಯ ಸ್ವಯಂ ಹೇಳಿಕೆ :-

ನಾನು ಕಳೆದ ನಾಲ್ಕೂವರೆ ವರ್ಷಗಳಿಂದ ಚಿಕ್ಕಮಗಳೂರಿನ ನಗರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ಮಾಡುತ್ತಿದ್ದೇನೆ.

ಈ ಕೇಸಿನಲ್ಲಿ ನನಗೆ ನ್ಯಾಯಾಲಯದಿಂದ ಉದ್ಘೋಷಣಾ ವರೆಂಟನ್ನು ಜಾರಿ ಮಾಡಲು ಆದೇಶ ಬಂದಿದ್ದು ಅದರ ಪ್ರಕಾರ ನಾನು ದಿ: 12-01-2020 ರಂದು ಸದರಿ ಆರೋಪಿ ವಾಸವಿದ್ದ ಬೆಂಗಳೂರಿನ ಬ್ರಾಡ್ ವೇ ಸ್ಟ್ರೀಟ್ ರಸಂ ಸರ್ಕಲ್ ನಲ್ಲಿ ಹೋಗಿ ಆರೋಪಿಯ ಬಗ್ಗೆ ವಿಚಾರಿಸಲಾಗಿ ಆತ ಸುಮಾರು 6 ವರ್ಷದಿಂದ ಊರು ಬಿಟ್ಟು ಹೋಗಿರುವುದಾಗಿ ಗೊತ್ತಾಯಿತು. ಆತನ ಚರ ಸ್ಥಿರ ಆಸ್ತಿಗಳ ಬಗ್ಗೆ ವಿಚಾರ ಮಾಡಲಾಗಿ ಏನೂ ಆಸ್ತಿ ಇಲ್ಲಾ ಅಂತ ತಿಳಿದುಬಂತು. ನಂತರ ಪಂಚರಾಗಿ ಜಾವೀದ್ ಬಿನ್ ಮೊಹಮ್ಮದ್ ಷರೀಫ್ ಮತ್ತು ಇಮ್ರಾನ್ ಬಿನ್ ಸಾಬ್ ಜಾನ್ ಅವರನ್ನು ಕರೆಸಿಕೊಂಡು ಅವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದೇನೆ. ನಂತರ ತಲೆ ಮರೆಸಿಕೊಂಡಿರುವ ಆರೋಪಿಯ ಬಗ್ಗೆ ಟಾಂಟಾಂ ಹೊಡೆಸಿ ಆತನ ಇರುವಿಕೆ ಬಗ್ಗೆ ಗೊತ್ತಾದರೆ ಪೋಲಿಸ್ ಠಾಣೆಗೆ ಮತ್ತು ಕೋರ್ಟಿಗೆ ತಿಳಿಸುವಂತೆ ಉದ್ಘೋಷಣೆ ಮಾಡಿದ್ದೇನೆ. ನಂತರ ಉದ್ಘೋಷಣಾ ವರೆಂಟ್ ಪ್ರತಿಯನ್ನು ರಸಂ ಸರ್ಕಲ್ ನಲ್ಲಿ ಗೋಡೆಗೆ ಮತ್ತು ಶಿವಾಜಿನಗರ ಬಸ್ ನಿಲ್ದಾಣದಲ್ಲಿ ಹಾಗೂ ಶಿವಾಜಿನಗರದ ಬಿಬಿಎಂಪಿ ಸಬ್ ಕಛೇರಿಗೆ ಮತ್ತು ಮೆಜಿಸ್ಟಿಕ್ ಬಸ್ ನಿಲ್ದಾಣದಲ್ಲಿ ಅಂಟಿಸಿರುತ್ತೇನೆ ಹಾಗೂ ಸಾರ್ವಜನಿಕರ ಅವಗಾಹನೆಗೆ ತಂದಿರುತ್ತೇನೆ. ನಾನು ಪಡೆದುಕೊಂಡ ಉದ್ಘೋಷಣಾ ವಾರೆಂಟನ್ನು ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸಿದ್ದೇನೆ ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ಉದ್ಘೋಷಣಾ ಮಹಜರನ್ನು ನಿಪಿ-17 ಎಂದು, ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಸಾಕ್ಷಿ ಗುರುತಿಸಿದ ಪಂಚರ ಸಹಿಗಳನ್ನು ನಿಪಿ-17(ಬಿ) ಮತ್ತು 17(ಸಿ) ಎಂದು ಗುರುತಿಸಲಾಯಿತು. ಬಿಬಿಎಂಪಿ ಯವರು ಕೊಟ್ಟ ಹಿಂಬರಹದ ನಕಲನ್ನು ನಿಪಿ-18 ಎಂದು ಗುರುತಿಸಲಾಯಿತು. ಆದರೂ ಈವರೆಗೆ ಆರೋಪಿ ಎಲ್ಲೂ ಸಿಗಲಿಲ್ಲ.

<u>ಮರು ಸವಾಲು : ಇಲ್ಲಾ</u>
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇ.ಎ.ಒ.**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ. **ಚಿಕ್ಕಮಗಳೂರು.**